

بِسۡمِ اللّٰہِ الرَّحۡمٰنِ الرَّحِیۡم

# ನಿಮ್ಮ ಸ್ವಭಾವ ಗುಣಗಳ ಮೂಲಕ ಇತರರ ಮೇಲೆ ಪ್ರಭಾವ ಬೀರಿರಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **09-06-2017** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ವಾರದ ಖುತ್‌ಬದಲ್ಲಿ ನಾನು ಹೇಳಿದ್ದೆ- ಉಪವಾಸಗಳ ಮತ್ತು ರಮಝಾನ್ ತಿಂಗಳ ಉದ್ದೇಶವಾಗಿ ಅಲ್ಲಾಹನು ಹೇಳಿರುವುದು ಹೃದಯಗಳಲ್ಲಿ ತಖ್ವವನ್ನು ಮೂಡಿಸುವುದಾಗಿದೆ ಎಂದು. ತಖ್ವವನ್ನು ಗಳಿಸುವ ವಿಧಾನಗಳೇನೆಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಿವರಿಸಿದ ಕೆಲವು ಉಲ್ಲೇಖಗಳನ್ನು ಸಹ ನಿಮ್ಮ ಮುಂದೆ ಇರಿಸಿದ್ದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಈ ವಿಷಯಗಳನ್ನು ನಮ್ಮ ಹೃದಯಗಳಲ್ಲಿ ಸ್ಥಿರವಾಗಿ ಸ್ಥಾಪಿಸಲು ವಿವಿಧ ಸ್ಥಳಗಳಲ್ಲಿ ಇದರ ಬಗ್ಗೆ ವಿವರಣೆಗಳನ್ನು ನೀಡಿದ್ದಾರೆ. ಅವರು ಹಾಗೆ ಮಾಡಿರುವುದು ಈ ವಿಷಯದ ಮಹತ್ವ ನಮ್ಮ ಹೃದಯಗಳಲ್ಲಿ ಬಲಿಷ್ಠವಾಗಿ ಸ್ಥಾಪಿಸಲ್ಪಟ್ಟು ನಮ್ಮ ಪ್ರತಿಯೊಂದು ಕರ್ಮದಲ್ಲಿಯೂ ಸ್ವಭಾವದಲ್ಲಿಯೂ ತಖ್ವ ಪ್ರಕಟವಾಗಲಿಕ್ಕಾಗಿದೆ. ಏಕೆಂದರೆ ತಖ್ವ ಇಲ್ಲವಾದರೆ ಯಾವುದೇ ರೀತಿಯ ಒಳಿತು ಉಂಟಾಗಲಾರದು. ಅಲ್ಪಕಾಲಿಕ ಒಳಿತನ್ನು ಪ್ರತಿಯೊಬ್ಬನು ತಾತ್ಕಾಲಿಕ ಉತ್ಸಾಹದ ಕಾರಣದಿಂದ ಮಾಡಬಹುದು. ಆದರೆ ವಾಸ್ತವಿಕ ತಖ್ವವನ್ನು ಹೊಂದಿದಾಗ ಮಾತ್ರ ಒಳಿತಿನಲ್ಲಿ ಕ್ರಮಬದ್ಧತೆ ಮತ್ತು ಸ್ಥಿರತೆ ತಲೆದೋರುತ್ತದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ ತಖ್ವಕ್ಕೆ ಅನೇಕ ಭಾಗಗಳಿವೆ: ಅಹಂಭಾವ, ತನ್ನಿಷ್ಟಪ್ರಕಾರ ವರ್ತನೆ, ನಿಷಿದ್ಧವಾಗಿ ಸಂಪತ್ತು ಗಳಿಕೆ ಇವುಗಳಿಂದ ತನ್ನನ್ನು ರಕ್ಷಿಸಿಕೊಳ್ಳುವುದು, ಕೆಟ್ಟ ಸ್ವಭಾವಗಳಿಂದ ರಕ್ಷಿಸಿಕೊಳ್ಳುವುದು ಸಹ ತಖ್ವವೇ ಆಗಿದೆ. ಯಾವ ವ್ಯಕ್ತಿ ಉತ್ತಮ ಸ್ವಭಾವ ಗುಣಗಳನ್ನು ಪ್ರಕಟಿಸುತ್ತಾನೋ ಅವನ ಶತ್ರು ಸಹ ಅವನ ಮಿತ್ರನಾಗುತ್ತಾನೆ. ಅಲ್ಲಾಹನು ಹೇಳುತ್ತಾನೆ: **ಇದ್‌ಫಅ್ ಬಿಲ್ಲತೀ ಹಿಯ ಅಹ್‌ಸನು ಸಯ್ಯಿಅತ.** ಒಳಿತಿನ ಮೂಲಕ ನೀನು ಕೆಡುಕನ್ನು ದೂರ ಮಾಡು. (ಪವಿತ್ರ ಖುರ್‌ಆನ್ 23:97). ವಿರೋಧಿಯಾಗಿರುವವನು ಬೈದರೆ ಸಹ ಅದಕ್ಕೆ ಉತ್ತರವಾಗಿ ಬೈಯ್ಯಬಾರದು. ಸಹನೆ ತೋರಬೇಕು. ಅದರ ಪರಿಣಾಮ ಏನಾಗುವುದೆಂದರೆ ನಿಮ್ಮ ವಿರೋಧಿ ನಿಮ್ಮ ಶ್ರೇಷ್ಠತೆಯನ್ನು ಮನವರಿಕೆ ಮಾಡಿಕೊಂಡು ನಾಚಿಕೆ ಪಡುವನು. ನೀವು ಪ್ರತೀಕಾರವಾಗಿ ನೀಡುವ ಶಿಕ್ಷೆಗಿಂತ ಅವನು ಅನುಭವಿಸುವ ಈ ಶಿಕ್ಷೆ ಬಹಳ ಹೆಚ್ಚಿನ ಮಟ್ಟದ್ದಾಗಿರುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಸದ್ಗುಣ ಎಂದರೆ ಮೃದುವರ್ತನೆ ಎಂದು ಮಾತ್ರ ಅರ್ಥ ಎಂದು ಯಾರಾದರೂ ಭಾವಿಸಬಾರದು. **ಖಲ್‌ಖ್** ಮತ್ತು **ಖುಲ್‌ಖ್** ವಿಭಿನ್ನ ಅರ್ಥಗಳನ್ನು ನೀಡುವ ಎರಡು ಶಬ್ದಗಳಾಗಿವೆ. **ಖಲ್‌ಖ್** ಎಂದರೆ ಬಾಹ್ಯ ಸೃಷ್ಟಿಯ ಹೆಸರು. ಕಣ್ಣು, ಮೂಗು, ಕೂದಲು ಇತ್ಯಾದಿಗಳು ಇದರಲ್ಲಿ ಸೇರಿವೆ. **ಖುಲ್‌ಖ್** ಎಂದರೆ ಆಂತರಿಕ ಸೃಷ್ಟಿ ಎಂದು ಅರ್ಥ. ಮನುಷ್ಯರಲ್ಲಿರುವ ವಿಶಿಷ್ಟ ಗುಣಗಳು, ಎಂದರೆ ಮನುಷ್ಯೇತರ ಜೀವಿಗಳಿಂದ ವ್ಯತ್ಯಾಸ ಮಾಡಿ ತೋರಿಸುವ ಗುಣಗಳು **ಖುಲ್‌ಖ್** ಆಗಿವೆ. ವಿವೇಕ, ಚಿಂತಾಶಕ್ತಿ ಮೊದಲಾದುವು ಖುಲ್‌ಖ್‌ನಲ್ಲಿ ಸೇರಿವೆ.

ಸದ್ಗುಣ ಎಂದರೆ ಅಲ್ಲಾಹನ ಸಂಪ್ರೀತಿಯನ್ನು ಗಳಿಸುವುದಾಗಿದೆ. ಅದಕ್ಕೋಸ್ಕರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೀವಿತ ಮಾದರಿ ಪ್ರಕಾರ ನಮ್ಮ ಜೀವಿತವನ್ನು ಮಾಡಲು ಪ್ರಯತ್ನಿಸಬೇಕಾದುದು ಆವಶ್ಯಕವಾಗಿದೆ. ಅಲ್ಲಾಹನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವೈಭವವನ್ನು ವಿವರಿಸುತ್ತಾ ಹೇಳಿದನು: **ವ ಇನ್ನಕ ಲಅಲಾ ಖುಲುಖಿನ್ ಅಝೀಮ್**. ದಿಟವಾಗಿಯೂ ನೀನು ಮಹೋನ್ನತವಾದ ನೈತಿಕ ಗುಣಗಳನ್ನು ಹೊಂದಿರುವೆ. (68:5). ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಜೀವಿತದ ಪ್ರತಿಯೊಂದು ಕ್ಷೇತ್ರದಲ್ಲಿ ತಮ್ಮ ಸದ್ಗುಣಗಳ ಎಂತಹ ಉದಾಹರಣೆಗಳನ್ನು ನೀಡಿದರೆಂದರೆ ಅವು ಅಪ್ರತಿಮವಾಗಿವೆ. ಪ್ರತಿಯೊಬ್ಬ ಸತ್ಯವಿಶ್ವಾಸಿ ತನ್ನ ಶಕ್ತಿ ಸಾಮರ್ಥ್ಯಗಳಿಗೆ ಅನುಸಾರವಾಗಿ ಅವುಗಳ ಪ್ರಕಾರ ಚಲಿಸುವುದು ಕಡ್ಡಾಯ ಕರ್ತವ್ಯವಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಗೆ ಸುಂದರವಾಗಿ ಮಾತನಾಡುತ್ತಿದ್ದರೆಂದರೆ ಅವರು ಶ್ರೋತೃಗಳನ್ನು ಆಶ್ಚರ್ಯ ಚಕಿತರಾಗಿ ಮಾಡುತ್ತಿದ್ದರು. ಅವರು ಯುದ್ಧ ಕ್ಷೇತ್ರದಲ್ಲಿ ಅತ್ಯಂತ ಶೌರ್ಯದಿಂದ ಹೋರಾಡುತ್ತಿದ್ದರು. ಅದೇರೀತಿ ಅವರು ಎಷ್ಟು ಔದಾರ್ಯವಂತರಾಗಿದ್ದರೆಂದರೆ ಬಂಗಾರದ ಪರ್ವತವನ್ನೇ ಹಂಚುತ್ತಿದ್ದರು. ಅವರು ಜ್ಞಾನದಲ್ಲಿ ತಮ್ಮ ವೈಭವ ಪ್ರದರ್ಶಿಸಿದರು. ವಧಾರ್ಹನಾದವನನ್ನು ಸಹ ಬಿಟ್ಟು ಬಿಡುತ್ತಿದ್ದರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅಪ್ರತಿಮವೂ ಪರಿಪೂರ್ಣವೂ ಆಗಿರುವ ಉದಾಹರಣೆಗಳನ್ನು ಅಲ್ಲಾಹನು ನಮಗೆ ತಿಳಿಸಿಕೊಟ್ಟನು. ಒಮ್ಮೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿ ಎಷ್ಟು ಕುರಿಗಳೂ ಆಡುಗಳೂ ಇತ್ತೆಂದರೆ ಖೈಸರ್ ಮತ್ತು ಕಿಸ್ರಾ ಎಂಬ ದೊರೆಗಳ ಬಳಿ ಸಹ ಅಷ್ಟು ಇರಲಿಲ್ಲ. ಅವುಗಳನ್ನೆಲ್ಲಾ ಬೇಡಿಕೊಂಡ ಒಬ್ಬನಿಗೆ ನೀಡಿದರು. ಇದು ಅವರ ಸದ್ಗುಣಗಳ ಪ್ರಕಟಣೆಗಳಾಗಿವೆ. ಅವರ ಬಳಿ ಇವು ಇಲ್ಲದಿದ್ದರೆ ಕೊಡಲು ಹೇಗೆ ಸಾಧ್ಯವಾಗುತ್ತಿತ್ತು. ಅವರಿಗೆ ಆಡಳಿತಾಧಿಕಾರಿಯಾಗುವ ಸ್ಥಿತಿ ಇಲ್ಲದಿರುತ್ತಿದ್ದರೆ ವಧಾರ್ಹರಾದ ಅವಿಶ್ವಾಸಿಗಳನ್ನು ತನಗೆ ಶಕ್ತಿ ಇದ್ದರೂ ಪ್ರತೀಕಾರ ಮಾಡದೆ ಕ್ಷಮಿಸಲು ಹೇಗೆ ಸಾಧ್ಯವಾಗುತ್ತಿತ್ತು. ಆ

ಅವಿಶ್ವಾಸಿಗಳು ಸಹಾಬರನ್ನು ಮತ್ತು ಮುಸ್ಲಿಮ್ ಮಹಿಳೆಯರನ್ನು ಕಠಿಣವಾದ ದೌರ್ಜನ್ಯಗಳಿಗೆ ಗುರಿಪಡಿಸಿದ್ದರು. ಇಂತಹ ಅಪರಾಧಿ ಜನರು ತನ್ನ ಮುಂದೆ ನಿಲ್ಲಿಸಲ್ಪಟ್ಟಾಗ ಹೇಳಿದರು **ಲಾ ತಸ್‌ರೀಬ ಅಲೈಕುಮುಲ್ ಯೌಮ್.** (ಇಂದು ನಿಮ್ಮ ವಿರುದ್ಧ ಯಾವುದೇ ದೋಷಾರೋಪಣೆ ಇಲ್ಲ). ಇವು ಎಂತಹ ಪರಿಪೂರ್ಣ ಉದಾಹರಣೆಗಳಾಗಿವೆ ಎಂದರೆ ಅವುಗಳ ಬಗ್ಗೆ ಅಲ್ಲಾಹನು ಹೇಳಿದನು: ಈ ಸಂದೇಶವಾಹಕರ ಮಾದರಿಯನ್ನು ನೀವು ಸಹ ನಿಮ್ಮ ಶಕ್ತಿ ಸಾಮರ್ಥ್ಯಗಳಿಗನುಸಾರವಾಗಿ ಅನುಸರಿಸಿರಿ.

ಇದಕ್ಕೋಸ್ಕರ ಪ್ರಯತ್ನ ಮತ್ತು ಕಠಿಣ ಪರಿಶ್ರಮ ಆವಶ್ಯಕವಾಗಿದೆ. ಇದರ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಮನುಷ್ಯನು ಪರಿಶ್ರಮ ಪಡದಿದ್ದರೆ ಮತ್ತು ಪ್ರಾರ್ಥನೆ ಮಾಡದಿದ್ದರೆ ಹೃದಯದಲ್ಲಿರುವ ನಿರ್ಲಕ್ಷ್ಯತೆ ದೂರ ಸರಿದು ಹೋಗಲಾರದು. ಅಲ್ಲಾಹನು ಹೇಳುತ್ತಾನೆ: **ಇನ್ನಲ್ಲಾಹ ಲಾ ಯುಗೈಯ್ಯಿರು ಮಾ ಬಿಕೌಮಿನ್ ಹತ್ತಾ ಯುಗಯ್ಯಿರು ಮಾ ಬಿಅನ್‌ಫುಸಿಹಿಮ್.** ಒಂದು ಸಮುದಾಯದವರು ತಮ್ಮ ಹೃದಯದಲ್ಲಿರುವುದಕ್ಕೆ ಸ್ವಯಂ ಮಾರ್ಪಾಟು ಮಾಡುವ ತನಕ ಅವರ ಸ್ಥಿತಿಗೆ ಅಲ್ಲಾಹನು ಮಾರ್ಪಾಟು ಮಾಡಲಾರನು. (13:12). ಇದು ಅಲ್ಲಾಹನು ಬದಲಾವಣೆ ಮಾಡದ ಒಂದು ನಡೆವಳಿಕೆಯಾಗಿದೆ. ಅಲ್ಲಾಹನು ಹೇಳುತ್ತಾನೆ: **ವಲನ್ ತಜಿದ ಲಿಸುನ್ನತಿಲ್ಲಾಹಿ ತಬ್‌ದೀಲ.** ಅಲ್ಲಾಹನ ವರ್ತನೆಯಲ್ಲಿ ನೀನು ಯಾವ ಬದಲಾವಣೆಯನ್ನೂ ಕಾಣಲಾರೆ. ಆದುದರಿಂದ ನಮ್ಮ ಜಮಾಅತಿನವರಾಗಲಿ ಅಥವಾ ಬೇರೆ ಯಾರೇ ಆಗಲಿ ಅವರು ಕಠಿಣ ಪರಿಶ್ರಮ ಮತ್ತು ಪ್ರಾರ್ಥನೆಗಳ ಮುಲಕವೇ ತಮ್ಮ ಸ್ವಭಾವ ಗುಣಗಳನ್ನು ಬದಲಾವಣೆ ಮಾಡಲು ಸಾಧ್ಯವಾಗುವುದು. ಹಾಗೆ ಮಾಡದಿದ್ದರೆ ಬದಲಾವಣೆ ಅಸಾಧ್ಯವಾಗುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳುತ್ತಾರೆ: ಒಬ್ಬನ ಸ್ವಭಾವ ಗುಣಗಳು ಎಷ್ಟು ಕೆಟ್ಟದಾಗಿದ್ದರೂ ಅವನು ತನ್ನ ಸ್ವಭಾವ ಗುಣಗಳನ್ನು ಸುಧಾರಣೆ ಮಾಡಲು ಇಚ್ಛಿಸುವುದಾದರೆ ಅವು ಸುಧಾರಣೆಗೊಳ್ಳಬಹುದಾಗಿವೆ. ಆದರೆ ಅದಕ್ಕೋಸ್ಕರ ಪರಿಶ್ರಮ ಪಡಬೇಕು. ವಾಸ್ತವವೇನೆಂದರೆ ಉದಾಸೀನತೆ ನಿವಾರಿಸಿ ಕೈ ಕಾಲುಗಳನ್ನು ಅಲುಗಾಡಿಸುವುದಾದರೆ ಸುಧಾರಣೆ ಸಾಧ್ಯವಿದೆ. ಸ್ವಭಾವಗುಣಗಳನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ಹೇಳಿದ ಜ್ಞಾನಿಗಳ ಅಭಿಪ್ರಾಯ ತಪ್ಪಾಗಿದೆ. ನಾವು ನೋಡುವುದೇನೆಂದರೆ ಕೆಲವು ಸರಕಾರಿ ಉದ್ಯೋಗಿಗಳು ಮೊದಲು ಲಂಚ ತೆಗೆದುಕೊಳ್ಳುವವರಾಗಿದ್ದು ಅನಂತರ ಸತ್ಯವಾಗಿ ಪಶ್ಚತ್ತಾಪಗೊಂಡು ಪ್ರಾರ್ಥಿಸಿದಾಗ (ತೌಬ ಮಾಡಿದಾಗ) ಅನಂತರ ಅವರಿಗೆ ಯಾರಾದರೂ ಬಂಗಾರದ ಬೆಟ್ಟ ನೀಡಿದರೂ ತೆಗೆದುಕೊಳ್ಳಲಾರರು.

ಸ್ವಭಾವಗುಣಗಳನ್ನು ದುರುಸ್ತಿ ಮಾಡುವ ಬಗ್ಗೆ ಗಮನ ಹರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನೆನಪಿಡಿರಿ, ವೃದ್ಧಾಪ್ಯ ಎರಡು ರೀತಿಗಳಲ್ಲಿವೆ. ಪ್ರಕೃತಿಸಹಜವಾದ ವೃದ್ಧಾಪ್ಯ ಮತ್ತು ಅಸಹಜ ವೃದ್ಧಾಪ್ಯ. ಸಹಜವಾದ ವೃದ್ಧಾಪ್ಯ ಶರೀರವನ್ನು ವೃದ್ಧಾಪ್ಯಕ್ಕೆ ತಲಪಿಸುತ್ತದೆ. ಅಸಹಜವಾದ ವೃದ್ಧಾಪ್ಯ ಉಂಟಾಗುವುದು ಒಬ್ಬನು ತನ್ನ ಶರೀರಕ್ಕೆ ಬಾಧಿಸಿದ ರೋಗಗಳ ಬಗ್ಗೆ ನಿರ್ಲಕ್ಷಿಸುವಾಗ. ಶರೀರಕ್ಕೆ ಬಾಧಿಸಿದ ರೋಗಗಳ ಬಗ್ಗೆ ಚಿಂತಿಸದೆ ನಿರ್ಲಕ್ಷಿಸಿದರೆ ಅದು ಮನುಷ್ಯನನ್ನು ಬಲಹೀನನನ್ನಾಗಿ ಮಾಡಿ ಅಕಾಲಿಕವಾಗಿ ವೃದ್ಧನಾಗುವಂತೆ ಮಾಡುತ್ತದೆ. ಇದೇ ರೀತಿ ಆಧ್ಯಾತ್ಮಿಕ ವ್ಯವಸ್ಥೆಯಲ್ಲೂ ಸಂಭವಿಸುತ್ತದೆ. ಒಬ್ಬನು ತನ್ನ ಕೆಟ್ಟ ಸ್ವಭಾವಗಳನ್ನು ಬದಲಾಯಿಸಿ ಉತ್ತಮ ಸ್ವಭಾವ ಗುಣಗಳನ್ನು ಹೊಂದುವುದಿಲ್ಲವಾದರೆ ಮತ್ತು ಅದಕ್ಕೋಸ್ಕರ ಪ್ರಯತ್ನ ಮಾಡುವುದಿಲ್ಲವಾದರೆ ಅವನ ಸ್ವಭಾವ ಗುಣಗಳು ಸಂಪೂರ್ಣವಾಗಿ ಕೆಟ್ಟು ಹೋಗುತ್ತವೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳಿಂದಲೂ ಪವಿತ್ರ ಖುರ್‌ಆನ್‌ನಿಂದಲೂ ಸಾಬೀತಾಗಿರುವುದೇನೆಂದರೆ ಪ್ರತಿಯೊಂದು ರೋಗಕ್ಕೆ ಮದ್ದು ಇದೆ ಎಂದು. ಆದರೆ ಉದಾಸೀನತೆ ಮತ್ತು ಸೋಮಾರಿತನ ಮನುಷ್ಯನ ಮೇಲೆ ಜಯಗಳಿಸಿರುವುದಾದರೆ ನಾಶದ ಹೊರತು ಬೇರೆ ಏನಿದೆ?

ಈಗ ಈ ಉದಾಸೀನತೆಯನ್ನು ದೂರ ಸರಿಸಲು ಅಲ್ಲಾಹನು ವ್ಯವಸ್ಥೆ ಮಾಡಿದ್ದಾನೆ. ಈ ರಮಝಾನ್ ತಿಂಗಳಲ್ಲಿ ಸ್ವಭಾವ ಗುಣಗಳನ್ನು ಉತ್ತಮ ಪಡಿಸಲು ಪ್ರತಿಯೊಬ್ಬನು ಗಮನಿಸಬೇಕು. ಬಲಹೀನತೆಗಳಿಂದಲೂ ಪಾಪ ಕೃತ್ಯಗಳಿಂದಲೂ ರಕ್ಷಿಸಿಕೊಳ್ಳುವ ಬಗ್ಗೆ ಸಹ ಗಮನ ಹರಿಸಬೇಕು. ಇದರ ಬಗ್ಗೆ ಗಮನ ಹರಿಸದಿದ್ದರೆ, ಈ ಸ್ಥಿತಿಯಲ್ಲಿ ಸುಧಾರಣೆ ಮಾಡದಿದ್ದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಹಾಗೆ ವೃದ್ಧಾಪ್ಯದ ಸ್ಥಿತಿ ಉಂಟಾಗುವುದು. ಅನಂತರ ಜೀವಿತದ ಅಂತ್ಯವಾಗುವುದು. ಆಗ ಅಲ್ಲಾಹನ ಮುಂದೆ ತಕ್ವ ರಹಿತನಾಗಿ ಹಾಜರಾಗಬೇಕಾಗುತ್ತದೆ.

ಸದ್ಗುಣಗಳನ್ನು ಸಂಪಾದಿಸಲು ತೌಬದ ಕಡೆಗೆ ಗಮನ ಹರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ತೌಬ, ಸದ್ಗುಣಗಳನ್ನು ಗಳಿಸಲು ಬಹಳ ಉತ್ತೇಜಕವೂ ಸಹಾಯಕವೂ ಆಗಿದೆ. ಅದು ಮನುಷ್ಯನನ್ನು ಪರಿಪೂರ್ಣನನ್ನಾಗಿ ಮಾಡುತ್ತದೆ. ಎಂದರೆ ತನ್ನ ಕೆಟ್ಟ ಸ್ವಭಾವ ಗುಣಗಳನ್ನು ಬದಲಾವಣೆ ಮಾಡಲು ಬಯಸುವವನು ಸತ್ಯ ಹೃದಯದಿಂದಲೂ ದೃಢ ನಿರ್ಧಾರದಿಂದಲೂ ತೌಬ ಮಾಡಬೇಕು. ಆದರೆ ತೌಬಕ್ಕೆ ಮೂರು ಶರತ್ತುಗಳಿವೆ ಎಂದು ನೆನಪಿನಲ್ಲಿಟ್ಟುಕೊಳ್ಳಬೇಕು. ಆ ಶರತ್ತುಗಳನ್ನು ಪಾಲಿಸದೆ ಸತ್ಯವಾದ ತೌಬ ಅಥವಾ ತೌಬತುನ್ನಸೂಹ್ ಗಳಿಸಲು ಸಾಧ್ಯವಿಲ್ಲ. ಈ ಮೂರು ಶರತ್ತುಗಳಲ್ಲಿ ಮೊದಲನೆಯದು: ಈ ಶರತ್ತನ್ನು ಅರಬಿ ಭಾಷೆಯಲ್ಲಿ **ಇಖ್‌ಲಾಅ್** ಎನ್ನುತ್ತಾರೆ. ಕೆಟ್ಟ ಯೋಚನೆಗಳನ್ನು ಮತ್ತು ಕೆಟ್ಟ ಕಲ್ಪನೆಗಳನ್ನು ತ್ಯಜಿಸಬೇಕು. ಉದಾಹರಣೆಗೆ ಒಬ್ಬನು ಒಬ್ಬ ಸ್ತ್ರೀಯೊಂದಿಗೆ ಯಾವುದಾದರೂ ನಿಷಿದ್ಧ ಸಂಬಂಧವಿರಿಸಿದ್ದರೆ ಅವನು ತೌಬ ಮಾಡುವುದಕ್ಕೆ ಆವಶ್ಯಕವಾಗಿರುವುದೇನೆಂದರೆ ಅವನು ಆ ಸ್ತ್ರೀಯನ್ನು ಕುರೂಪಿ ಎಂದು ಗಣಿಸಬೇಕು ಮತ್ತು ಅವಳ ಕೆಟ್ಟ ಸ್ವಭಾವ ಗುಣಗಳನ್ನು ತನ್ನ ಹೃದಯದಲ್ಲಿ ಬರಿಸಬೇಕು.

ಏಕೆಂದರೆ ನಾನು ಈಗ ತಾನೆ ಹೇಳಿದ ಹಾಗೆ ಕಲ್ಪನೆಗಳ ಪ್ರಭಾವ ಬಹಳ ತೀವ್ರವಾಗಿರುತ್ತದೆ. ನಾನು ಸೂಫಿಗಳ ಪುಸ್ತಕಗಳಲ್ಲಿ ಓದಿದ್ದೇನೆ, ಅವರು ಕಲ್ಪನೆಯನ್ನು ಎಲ್ಲಿಯ ತನಕ ತಲಪಿಸಿದ್ದಾರೆಂದರೆ ಅವರು ಮನುಷ್ಯರನ್ನು ಮಂಗ ಅಥವಾ ಹಂದಿಯ ರೂಪದಲ್ಲಿ ಕಂಡರು. ಸಂಕ್ಷಿಪ್ತವಾಗಿ, ಒಬ್ಬನು ಹೇಗೆ ಕಲ್ಪನೆ ಮಾಡುತ್ತಾನೋ ಹಾಗೆಯೇ ಅವನು ಕಾಣುತ್ತಾನೆ. ಆದುದರಿಂದ ಯಾವ ಯೋಚನೆಗಳಿಂದ ಕೆಟ್ಟ ಅಭಿರುಚಿಗಳು ಹುಟ್ಟಲು ಕಾರಣವಾಗುತ್ತಿವೆಯೋ ಅವುಗಳನ್ನು ಸಂಪೂರ್ಣವಾಗಿ ಹೊರದಬ್ಬಬೇಕು.

ಎರಡನೆಯ ಶರತ್ತು, ಪಶ್ಚಾತ್ತಾಪಡುವುದಾಗಿದೆ. ಪಾಪಕೃತ್ಯಗಳನ್ನು ಮತ್ತು ಕೆಟ್ಟ ಕೃತ್ಯಗಳನ್ನು ಮಾಡಿದ ಬಗ್ಗೆ ಪಶ್ಚಾತ್ತಾಪ ಪಡಬೇಕು. ಮತ್ತು ಆ ಅಭಿರುಚಿಗಳು ತಾತ್ಕಲಿಕವೂ ಕೆಲವು ದಿನಗಳಿಗೋಸ್ಕರವಾಗಿರುವವು ಎಂದೂ ಯೋಚಿಸಬೇಕು. ಹೀಗೆ ಸಹ ಯೋಚಿಸಬೇಕು ಪ್ರತಿಬಾರಿ ಈ ರಸಾನುಭೂತಿ ಮತ್ತು ಸುಖ ಕಡಿಮೆಯಾಗುತ್ತಾ ಇರುತ್ತದೆ; ಕೊನೆಗೆ ವೃದ್ಧಾಪ್ಯದಲ್ಲಿ ಎಲ್ಲ ಶಕ್ತಿಗಳು ಬಲಹೀನವೂ ನಿಷ್ಪ್ರಯೋಜಕವೂ ಆಗುತ್ತವೆ; ಕೊನೆಗೆ ಈ ಲೌಕಿಕ ರಸಾನುಭೂತಿಗಳನ್ನು ತ್ಯಜಿಸಿ ಹೋಗಬೇಕಾಗುತ್ತದೆ. ಈ ಜೀವಿತ ಕಾಲದಲ್ಲಿಯೇ ಈ ಎಲ್ಲ ರಸಾನುಭೂತಿಗಳು ಕೈಬಿಟ್ಟು ಹೋಗಲಿರುವಾಗ ಅವುಗಳಿಂದ ಗಳಿಸುವುದಾದರೂ ಏನು? ಎಂದು ಯೋಚಿಸಬೇಕು. ತೌಬದ ಕಡೆಗೆ ತಿರುಗುವವನು ಬಹಳ ಅದೃಷ್ಟಶಾಲಿಯಾಗಿದ್ದಾನೆ. ಅದಕ್ಕಾಗಿ ಒಬ್ಬನು ಮೊದಲು ಕೆಟ್ಟ ಯೋಚನೆಗಳನ್ನು ಹೊರದಬ್ಬಬೇಕು. ಈ ಕೊಳಕಿನಿಂದ ಹೊರಗೆ ಬಂದ ನಂತರ ಪಶ್ಚಾತ್ತಾಪ ಪಡಬೇಕು.

ಮೂರನೆಯ ಶರತ್ತು, ದೃಢ ನಿರ್ಧಾರ ಮಾಡುವುದಾಗಿದೆ. ಇನ್ನು ಮುಂದೆ ಈ ಕೆಡುಕುಗಳ ಕಡೆಗೆ ತಿರುಗಲಾರೆನೆಂದು ದೃಢ ನಿರ್ಧಾರ ಮಾಡಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಮ್ಮ ಜಮಾಅತಿನಲ್ಲಿ ಪಹಿಲ್ವಾನರ ಹಾಗೆ ಶಾರೀರಿಕ ಶಕ್ತಿವಂತರ ಆವಶ್ಯಕತೆ ಇಲ್ಲ. ಆದರೆ ತಮ್ಮ ಸ್ವಭಾವ ಗುಣಗಳನ್ನು ಬದಲಾಯಿಸಲು ಪ್ರಯತ್ನ ಮಾಡುವವರ ಆವಶ್ಯಕತೆ ಇದೆ. ವಾಸ್ತವಿಕವಾಗಿ ಬೆಟ್ಟವನ್ನು ಅದರ ಸ್ಥಳದಿಂದ ದೂರ ಸರಿಸುವವನಲ್ಲ ಶಕ್ತಿಶಾಲಿ; ಯಾರು ತನ್ನ ಸ್ವಭಾವ ಗುಣಗಳನ್ನು ಬದಲಾಯಿಸುವ ಶಕ್ತಿ ಹೊಂದಿರುತ್ತಾನೋ ಅವನೇ ನಿಜವಾದ ಶೂರನಾಗಿದ್ದಾನೆ. ಆದುದರಿಂದ ನೆನಪಿಡಿರಿ, ನಿಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳನ್ನೂ ಸ್ವಭಾವಗುಣಗಳ ಪರಿವರ್ತನೆಗಾಗಿ ಬಳಸಿರಿ. ಏಕೆಂದರೆ ಇದೇ ವಾಸ್ತವಿಕವಾದ ಶಕ್ತಿ ಮತ್ತು ಧೈರ್ಯವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸದ್ಗುಣಗಳಲ್ಲಿ ಎಂತಹ ಪವಾಡ ಇರುತ್ತದೆ ಎಂದರೆ ಯಾರಿಗೂ ಅದರ ಬಗ್ಗೆ ಆಕ್ಷೇಪಿಸಲು ಸಾಧ್ಯವಾಗದು. ಇದೇ ಕಾರಣದಿಂದ ನಮ್ಮ ಪೈಗಂಬರ್ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಎಲ್ಲದಕ್ಕಿಂತಲೂ ಬಲಶಾಲಿಯಾದ ಪವಾಡ ನೀಡಲ್ಪಟ್ಟದ್ದು ಸದ್ಗುಣದ ಪವಾಡವನ್ನಾಗಿದೆ. ಅಲ್ಲಾಹನು ಅವರೊಂದಿಗೆ ಹೇಳಿದನು: **ಇನ್ನಕ ಲಅಲಾ ಖುಲುಖಿನ್ ಅಝೀಮ್.** ದಿಟವಾಗಿಯೂ ನೀನು ಮಹೋನ್ನತವಾದ ನೈತಿಕ ಗುಣಗಳನ್ನು ಹೊಂದಿರುವೆ. (68:5). ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಎಲ್ಲಾ ರೀತಿಗಳ ಅದ್ಭುತ ಕೃತ್ಯಗಳಲ್ಲಿ ಇತರ ಎಲ್ಲ ಪ್ರವಾದಿಗಳಿಗಿಂತ ಮೇಲಿನ ಸ್ಥಾನದಲ್ಲಿದ್ದರು. ಆದರೆ ಅವರ ಸದ್ಗುಣಗಳ ಪವಾಡ ಅವರೆಲ್ಲರಿಗಿಂತ ಪ್ರಥಮ ಸ್ಥಾನದಲ್ಲಿದೆ. ಅವುಗಳಿಗೆ ಸಮಾನವಾದುದು ಲೋಕದ ಚರಿತ್ರೆ ನಮಗೆ ತೋರಿಸಿಕೊಡಲಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಒಬ್ಬನು ತನ್ನ ದುರ್ಗುಣಗಳನ್ನೂ ದುಸ್ವಭಾವಗಳನ್ನೂ ಬಿಟ್ಟು ಸದ್ಗುಣಗಳನ್ನು ತೆಗೆದು ಕೊಳ್ಳುವುದಾದರೆ ಅದೇ ಅವನು ಮಾಡುವ ಅದ್ಭುತ ಕೃತ್ಯವಾಗಿದೆ. ಉದಾಹರಣೆಗೆ ಬಹಳ ಶೀಘ್ರಕೋಪಿಯಾದ ಒಬ್ಬನು ಕೋಪವನ್ನೂ ಕೆಟ್ಟ ಸ್ವಭಾವಗುಣಗಳನ್ನೂ ಬಿಟ್ಟುಬಿಡುವುದಾದರೆ ಸಹಿಷ್ಣುತೆಯನ್ನೂ ಕ್ಷಮೆಯನ್ನೂ ಅವಲಂಬಿಸುವವನಾದರೆ ನಿಶ್ಚಯವಾಗಿಯೂ ಇದೊಂದು ಅದ್ಭುತ ಕೃತ್ಯವೇ ಆಗಿದೆ. ಜಿಪುಣತನವನ್ನು ಬಿಟ್ಟು ಔದಾರ್ಯವಂತನಾಗುವುದಾದರೆ ದ್ವೇಷಕ್ಕೆ ಬದಲಾಗಿ ಸಹಾನುಭೂತಿ ತೋರಿಸುವುದಾದರೆ ನಿಸ್ಸಂಶಯವಾಗಿಯೂ ಇದು ಪವಾಡ ಕೃತ್ಯವೇ ಆಗಿದೆ. ಇದೇ ರೀತಿ ಅಹಂಭಾವವನ್ನು ತ್ಯಜಿಸಿ ವಿನಯವನ್ನು ಒಬ್ಬನು ಅವಲಂಬಿಸುವುದಾದರೆ ಅದು ಸಹ ಒಂದು ಪವಾಡವೇ ಆಗಿದೆ. ಆದುದರಿಂದ ನಿಮ್ಮ ಪೈಕಿ ಯಾರು ಪವಾಡ ತೋರಿಸುವವನಾಗಲು ಬಯಸುವುದಿಲ್ಲ? ಪ್ರತಿಯೊಬ್ಬನು ಹೀಗಾಗಲು ಬಯಸುತ್ತಾನೆಂದು ನನಗೆ ತಿಳಿದಿದೆ. ಮನುಷ್ಯನು ತನ್ನ ಸ್ವಭಾವ ಗುಣಗಳನ್ನು ದುರಸ್ತಿ ಮಾಡಬೇಕು. ಇದು ಎಂತಹ ಅದ್ಭುತ ಕೃತ್ಯವೆಂದರೆ ಅದರ ಪ್ರಭಾವ ಎಂದೂ ಕೊನೆಗೊಳ್ಳಲಾರದು. ಅದರಿಂದ ಸಿಗುವ ಲಾಭ ದೂರದ ತನಕ ತಲಪುತ್ತದೆ. ಆದುದರಿಂದ ಸತ್ಯವಿಶ್ವಾಸಿಯಾದವನು ಸೃಷ್ಟಿಗಳ ಮುಂದೆ ಮತ್ತು ಸೃಷ್ಟಿಕರ್ತನ ಮುಂದೆ ಅದ್ಭುತ ಕೃತ್ಯ ತೋರಿಸುವವನಾಗಬೇಕು.

ಅನೇಕ ಭೋಗಲಾಲಸಿಗರನ್ನು ಕಂಡಿದ್ದೇವೆ. ಅವರು ಯಾವುದೇ ಅಸಾಧಾರಣ ದೃಷ್ಟಾಂತದಿಂದ ಪ್ರಭಾವಿತರಾಗಲಿಲ್ಲ. ಆದರೆ ಸದ್ಗುಣಗಳನ್ನು ನೋಡಿ ಅವರು ತಲೆಬಾಗಿದರು. ಅವರಿಗೆ ಅದನ್ನು ಅಂಗೀಕರಿಸದೆ ಇರಲು ಸಾಧ್ಯವಾಗಲಿಲ್ಲ. ಅನೇಕ ಜನರ ಜೀವನ ಚರಿತ್ರೆಗಳಿಂದ ಸಾಬೀತಾಗುವುದೇನೆಂದರೆ ಅವರು ಸದ್ಗುಣಗಳ ಪವಾಡಗಳನ್ನು ನೋಡಿಯೇ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರು.

ಸತ್ಯ ವಿಶ್ವಾಸವನ್ನು ಅಂಗೀಕರಿಸುವ ವಿವಿಧ ಕಾರಣಗಳನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪ್ರವಾದಿಗಳನ್ನು ಎದುರಿಸಿದ ದುರ್ಜನರು ಮತ್ತು ವಿಶಿಷ್ಟವಾಗಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಎದುರಿಸಿದ ದುರ್ಜನರ ಪೈಕಿ ವಿಶ್ವಾಸ ಹೊಂದಿದವರು ಪವಾಡ ಕೃತ್ಯಗಳ ಕಾರಣದಿಂದ ಸತ್ಯ ವಿಶ್ವಾಸಿಗಳಾಗಿರಲಿಲ್ಲ. ಅಸಾಧಾರಣ ದೃಷ್ಟಾಂತಗಳು ಅವರಿಗೆ

ಸಮಾಧಾನಕರವಾಗಿರಲಿಲ್ಲ. ಆ ಜನರು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶ್ರೇಷ್ಠ ಸದ್ಗುಣಗಳನ್ನು ನೋಡಿ ಅವರು ಸತ್ಯಸಂಧರೆಂದು ಅಂಗೀಕರಿಸಿದರು. ಅನೇಕ ದೃಷ್ಟಾಂತಗಳನ್ನು ನೋಡಿಯೂ ಸಮಾಧಾನ ಪಡೆಯದವರ ಮೇಲೆ ಸಹ ಸುಸ್ವಭಾವಗಳ ಪರಿಣಾಮ ಉಂಟಾಗುತ್ತದೆ. ಖಂಡಿತವಾಗಿಯೂ ಕೆಲವರು ಬಾಹ್ಯ ಪವಾಡಗಳನ್ನೂ ದೃಷ್ಟಾಂತಗಳನ್ನೂ ನೋಡಿ ನಂಬುತ್ತಾರೆ. ಬೇರೆ ಕೆಲವರು ಸತ್ಯ ಮತ್ತು ಜ್ಞಾನದಿಂದ ಪ್ರಭಾವಿತರಾಗಿ ನಂಬುತ್ತಾರೆ. ಆದರೆ ಬಹುತೇಕ ಜನರು ಮಾರ್ಗದರ್ಶನ ಮತ್ತು ಸಮಾಧಾನ ಗಳಿಸಲು ಕಾರಣ ಸದ್ಗುಣಗಳಾಗಿರುತ್ತವೆ.

ಇಂದಿನ ಕಾಲದಲ್ಲಿ ಸಹ ಅಸಂಖ್ಯಾತ ಜನರು ಅಹ್ಮದಿಯಾ ಜಮಾಅತಿಗೆ ಸೇರುತ್ತಿರುವುದರ ಕಾರಣ ಯಾವುದಾದರೊಬ್ಬ ಅಹ್ಮದಿಯ ಸ್ವಭಾವ ಗುಣದಿಂದ ಪ್ರಭಾವಿತರಾಗಿ ಅಥವಾ ಅಹ್ಮದಿಯರ ಸಾಮೂಹಿಕವಾದ ಸ್ವಭಾವ ಗುಣಗಳಿಂದ ಪ್ರಭಾವಿತರಾಗಿ ಆಗಿದೆ. ಆದುದರಿಂದ ಪ್ರತಿಯೊಬ್ಬ ಅಹ್ಮದಿ ಗಮನಿಸಬೇಕಾದ ವಿಷಯವೇನೆಂದರೆ ಸದ್ಗುಣಗಳು ಕೇವಲ ತಮ್ಮ ತಖ್ವವನ್ನು ವರ್ಧಿಸಲಿಕ್ಕೋಸ್ಕರ ಮಾತ್ರವಲ್ಲ ಅದೊಂದು ಧಾರ್ಮಿಕ ಕಡ್ಡಾಯ ಕರ್ತವ್ಯ ಸಹ ಆಗಿದೆ. ಅದು ಅನ್ಯರನ್ನು ಸುಧಾರಣೆ ಮಾಡುವ ಮಾರ್ಗವೂ ಆಗಿದೆ. ಆದುದರಿಂದ ಪ್ರತಿಯೊಬ್ಬ ಅಹ್ಮದಿ ತನ್ನ ಸ್ವಭಾವ ಗುಣದ ಮೇಲೆ ದೃಷ್ಟಿ ಇರಿಸಬೇಕು.

ಈಮಾನ್ (ಸತ್ಯವಿಶ್ವಾಸ) ಇದರ ರೀತಿ ಹೇಗೆ? ಇದನ್ನು ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನಿಂದ ಸುಧಾರಣೆ ಇಚ್ಛಿಸುವುದು ಮತ್ತು ತನ್ನ ಶಕ್ತಿ ಅದಕ್ಕೋಸ್ಕರ ಬಳಸುವುದು ಇದೇ ಈಮಾನಿನ ರೀತಿಯಾಗಿದೆ. ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಒಬ್ಬನು ದೃಢ ನಂಬಿಕೆಯಿಂದ ತನ್ನ ಕೈಯ್ಯನ್ನು ಪ್ರಾರ್ಥನೆಗೆ ಎತ್ತುವುದಾದರೆ ಅಲ್ಲಾಹನು ಅವನ ಪ್ರಾರ್ಥನೆಯನ್ನು ತಿರಸ್ಕರಿಸಲಾರನು. ಆದುದರಿಂದ ಅಲ್ಲಾಹನಿಂದ ಬೇಡಿಕೊಳ್ಳಿರಿ. ದೃಢವಿಶ್ವಾಸದೊಂದಿಗೆ ಬೇಡಿಕೊಳ್ಳಿರಿ. ಸತ್ಯ ಸಂಕಲ್ಪದೊಂದಿಗೆ ಬೇಡಿಕೊಳ್ಳಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾನು ಮತ್ತೂ ಉಪದೇಶಿಸುತ್ತೇನೆ, ಒಳ್ಳೆಯ ಸ್ವಭಾವ ಗುಣಗಳನ್ನು ಪ್ರಕಟಿಸುವುದು ತನ್ನ ದೃಷ್ಟಾಂತ ಪ್ರಕಟಣೆಯಾಗಿದೆ. ನೋಡಿರಿ ಭೂಲೋಕದ ವಿವಿಧ ಭಾಗಗಳಲ್ಲಿ ಕಾಣಿಸುತ್ತಿರುವ ಕೋಟಿಗಟ್ಟಲೆ ಮುಸ್ಲಿಮರು, ಅವರು ಖಡ್ಗದ ಭೀತಿಯಿಂದ ಅಥವಾ ಬಲಾತ್ಕಾರದಿಂದ ಮುಸ್ಲಿಮರಾದರೆ? ಖಂಡಿತವಾಗಿಯೂ ಅಲ್ಲ. ಇಸ್ಲಾಮಿನ ಅದ್ಭುತ ಪ್ರಭಾವ ಅವರನ್ನು ಇಸ್ಲಾಮಿಗೆ ಸೆಳೆಯಿತು. ಇಸ್ಲಾಮಿನ ಸತ್ಯದ ಆತ್ಮ ಎಷ್ಟು ಬಲಶಾಲಿಯಾಗಿದೆ ಎಂದರೆ ಅನ್ಯ ಜನಾಂಗಗಳನ್ನು ಇಸ್ಲಾಮಿಗೆ ಪ್ರವೇಶಿಸಲು ಅದು ನಿರ್ಬಂಧಿಸುತ್ತದೆ ಎಂಬುದನ್ನು ದೊಡ್ಡ ದೊಡ್ಡ ಆಂಗ್ಲೇಯ ಸಂಶೋಧಕರು ಸಹ ಸಮ್ಮತಿಸಲು ನಿರ್ಬಂಧಿತರಾದರು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸದ್ಗುಣಗಳು ಆಹಾರದ (ರಿಝ್ಖಿನ) ಹಾಗಿದೆ. ಅವುಗಳನ್ನು ಪ್ರಕಟಿಸುವುದು ಅಲ್ಲಾಹನು ನೀಡಿದ ಆಹಾರವನ್ನು ಖರ್ಚು ಮಾಡುವ ರೀತಿಯಲ್ಲಿದೆ. ಇದು ಸಹ ತಖ್ವದ ಒಂದು ಪ್ರಾಯೋಗಿಕ ಭಾಗವಾಗಿದೆ. ಸಾಮಾನ್ಯ ಜನರು ಆಹಾರ (ರಿಝ್ಖ್) ಎಂದರೆ ಭಕ್ಷಿಸುವ ಪದಾರ್ಥ ಮಾತ್ರ ಎಂದು ಭಾವಿಸುತ್ತಾರೆ. ಇದು ತಪ್ಪು. ಮನುಷ್ಯನಿಗೆ ನೀಡಲ್ಪಡುವ ಶಕ್ತಿಗಳು ಸಹ ಆಹಾರ (ರಿಝ್ಖ್) ಆಗಿದೆ. ವಿದ್ಯೆಗಳು, ನೈಪುಣ್ಯತೆ, ವಸ್ತುಗಳ ಬಗ್ಗೆ ಜ್ಞಾನ ಇವೆಲ್ಲವೂ ರಿಝ್ಖ್‌ನಲ್ಲಿ ಸೇರಿವೆ. ಅದೇ ರೀತಿ ಸಂಪತ್ತು ವಿಶಾಲವಾಗಿರುವುದು ಸಹ ರಿಝ್ಖ್ ಆಗಿವೆ. ಮನುಷ್ಯನ ಶಕ್ತಿ ಸಾಮರ್ಥ್ಯಗಳು, ಸದ್ಗುಣಗಳು, ಸಂಪತ್ತು ಎಲ್ಲವೂ ರಿಝ್ಖ್‌ನಲ್ಲಿ ಸೇರಿವೆ. ರಿಝ್ಖ್‌ನಲ್ಲಿ ಸರಕಾರದ ಅಧಿಕಾರವೂ ಸೇರಿದೆ. ಶ್ರೇಷ್ಠ ಗುಣಗಳೂ ರಿಝ್ಖ್ ಆಗಿವೆ.

ಸಂಪತ್ತು ಹೊಂದಿದ್ದು ಅದನ್ನು ಅರ್ಹನಾದವನಿಗೆ ಕೊಡದವನು ಮಾತ್ರ ಜಿಪುಣನಲ್ಲ. ಜ್ಞಾನವನ್ನು ಹೊಂದಿದವನು ಅದನ್ನು ಇತರರಿಗೆ ಕಲಿಸುವುದರಲ್ಲಿ ನಿರಾಸಕ್ತನಾದವನೂ ಜಿಪುಣನಾಗಿದ್ದಾನೆ. ಒಬ್ಬನು ತನಗಿರುವ ಜ್ಞಾನವನ್ನು ಮತ್ತು ನೈಪುಣ್ಯತೆಯನ್ನು ಅನ್ಯನಿಗೆ ಕಲಿಸದಿರುವುದು, ಹಾಗೆ ಕಲಿತವನು ತನ್ನನ್ನು ಗೌರವಿಸಲಾರನು ಅಥವಾ ನನ್ನ ಸಂಪಾದನೆಯಲ್ಲಿ ವ್ಯತ್ಯಾಸ ಉಂಟಾಗುವುದು ಎಂದು ಭಾವಿಸುವುದರಿಂದ ಆಗಿದ್ದರೆ ಅದು ಶಿರ್ಕ್ ಆಗಿದೆ. ಏಕೆಂದರೆ ಹಾಗೆ ಭಾವಿಸುವವನು ತನ್ನ ಜ್ಞಾನ ಮತ್ತು ತನ್ನ ನೈಪುಣ್ಯತೆಯನ್ನು ತನ್ನ ರಾಝಿಖ್ (ಆಹಾರ ನೀಡುವ) ದೇವನೆಂದು ಭಾವಿಸುತ್ತಾನೆ. ಅದೇ ರೀತಿ ತನ್ನ ಸದ್ಗುಣಗಳನ್ನು ಬಳಸದವನು ಜಿಪುಣನಾಗಿದ್ದಾನೆ. ಸದ್ಗುಣಗಳನ್ನು ಬಳಸುವುದು ಹೇಗೆಂದರೆ, ಅಲ್ಲಾಹನು ತನ್ನ ಅನುಗ್ರಹವಾಗಿ ಯಾರಿಗಾದರೂ ಸದ್ಗುಣಗಳನ್ನು ನೀಡಿದ್ದರೆ ಅಲ್ಲಾಹನ ಸೃಷ್ಟಿಗಳೊಂದಿಗೆ ಆ ಸ್ವಭಾವ ಗುಣಗಳೊಂದಿಗೆ ವರ್ತಿಸಬೇಕು. ಜನರು ಸದ್ಗುಣಶಾಲಿಯ ಉದಾಹರಣೆಯನ್ನು ನೋಡಿ ತಮ್ಮಲ್ಲಿ ಸದ್ಗುಣವನ್ನು ಹುಟ್ಟಿಸಲು ಪ್ರಯತ್ನಿಸುವರು. ಸದ್ಗುಣ ಎಂದರೆ ಕೇವಲ ಮೃದು ಮಾತು ಮತ್ತು ಮೃದು ಶಬ್ದಗಳ ಬಳಕೆ ಮಾತ್ರವಲ್ಲ. ಶೌರ್ಯ, ಸಹಾನುಭೂತಿ, ಸಚ್ಚಾರಿತ್ರ್ಯ ಮೊದಲಾದ ಮನುಷ್ಯನಿಗೆ ನೀಡಲ್ಪಟ್ಟ ಎಲ್ಲ ಶಕ್ತಿಗಳೂ ಸದ್ಗುಣಶಕ್ತಿಗಳಾಗಿವೆ. ಅವುಗಳನ್ನು ಸಂದರ್ಭೋಚಿತವಾಗಿ ಬಳಸುವುದೇ ಸದ್ಗುಣಗಳಾಗಿವೆ.

ತನ್ನ ಜಮಾಅತಿನ ಜನರು ಉನ್ನತ ಸ್ವಭಾವ ಗುಣಗಳನ್ನು ಹೊಂದುವ ಬಗ್ಗೆ ಮತ್ತು ತಮ್ಮೊಳಗೆ ಉತ್ತಮ ಪರಿವರ್ತನೆ ಉಂಟುಮಾಡುವ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೀಗೆ ಉಪದೇಶಿಸಿರುವರು: ಒಬ್ಬನು ತನ್ನ ನೆರೆಹೊರೆಯವನಿಗೆ ತನ್ನಲ್ಲಿ ಉಂಟಾದ ಬದಲಾವಣೆಯನ್ನು, ನಾನು ಮೊದಲು ಹೀಗೆ ಇದ್ದೆ ಈಗ ಹೇಗೆ ಆಗಿದ್ದೇನೆ ಎಂದು ತೋರಿಸುವುದಾದರೆ ಅವನು ಒಂದು ಅದ್ಭುತಕೃತ್ಯ (ಕರಾಮತ್) ತೋರಿಸುತ್ತಿದ್ದಾನೆ. ಅದರ ಪ್ರಭಾವ ಅವನ ನೆರೆಹೊರೆಯವರ ಮೇಲೆ ಬಹಳ ಹೆಚ್ಚಿನ ಮಟ್ಟದಲ್ಲಿ ಉಂಟಾಗುತ್ತದೆ. ಒಬ್ಬನು ಒಂದು ಜಮಾಅತಿಗೆ ಸೇರಿದ ನಂತರ ಆ ಜಮಾಅತಿನ ಮಹತ್ವವನ್ನು ಅದರ ಗೌರವವನ್ನು ಕಡೆಗಣಿಸುವವನಾದರೆ ಮತ್ತು ಅದಕ್ಕೆ ವಿರುದ್ಧವಾಗಿ ವರ್ತಿಸುವುದಾದರೆ ಅವನು ಅಲ್ಲಾಹನಿಂದ ಹಿಡಿಗೂಡಲ್ಪಡುತ್ತಾನೆ. ಅವನು ತನ್ನನ್ನು ಮಾತ್ರ ನಾಶಕ್ಕೆ

ಗುರಿಪಡಿಸುವವನಾಗುವುದಿಲ್ಲ. ಅವನು ತನ್ನ ಕೆಟ್ಟ ಉದಾಹರಣೆಯಿಂದ ಅನ್ಯರನ್ನು ಸಹ ಸಾತ್ವಿಕತೆಯಿಂದಲೂ ಮಾರ್ಗದರ್ಶನದಿಂದಲೂ ವಂಚಿತವರನ್ನಾಗಿ ಮಾಡುತ್ತಾನೆ. ಆದುದರಿಂದ ನೀವು ನಿಮಗಿರುವ ಶಕ್ತಿಗೆ ಅನುಸಾರವಾಗಿ ಅಲ್ಲಾಹನಿಂದ ಸಹಾಯವನ್ನು ಬೇಡಿಕೊಳ್ಳಿರಿ. ನಿಮ್ಮ ಪೂರ್ಣ ಶಕ್ತಿಯನ್ನು ಬಳಸಿ ನಿಮ್ಮ ಬಲಹೀನತೆಗಳನ್ನು ದೂರ ಸರಿಸಲು ಪ್ರಯತ್ನಿಸಿರಿ. ನೀವು ಬಲಗುಂದಿದವರಾಗಿದ್ದರೆ ನೀವು ಸತ್ಯದಿಂದಲೂ ದೃಢ ನಂಬಿಕೆಯಿಂದಲೂ ಕೈಎತ್ತಿ ಪ್ರಾರ್ಥಿಸಿರಿ. ಏಕೆಂದರೆ ವಿನಯಾನ್ವಿತನಾಗಿ ಎತ್ತಿದ ಕೈ ಸತ್ಯ ಮತ್ತು ದೃಢ ವಿಶ್ವಾಸದಿಂದ ಎತ್ತಿದ ಕೈ ಬರಿದಾಗಿ ಮರಳಲಾರದು. ನಾವು ನಮ್ಮ ಅನುಭವದಿಂದ ಹೇಳುತ್ತೇವೆ ನಮ್ಮ ಸಾವಿರಾರು ಪ್ರಾರ್ಥನೆಗಳು ಅಂಗೀಕರಿಸಲ್ಪಟ್ಟಿವೆ. ಈಗಲೂ ಅಂಗೀಕರಿಸಲ್ಪಡುತ್ತಿವೆ.

ಯಾವುದಾದರೂ ಒಬ್ಬ ವ್ಯಕ್ತಿ ತನ್ನೊಳಗೆ ಮಾನವರ ಬಗ್ಗೆ ಸಹಾನುಭೂತಿಯನ್ನು ಹೊಂದಿಲ್ಲವಾದರೆ ಅವನು ಜಿಪುಣನಾಗಿದ್ದಾನೆ. ಜನರಿಗೆ ಹಿತಕರವೂ ಪ್ರಯೋಜನಕರವೂ ಆಗಿರುವ ಒಂದು ಮಾರ್ಗವನ್ನು ನಾನು ಕಂಡರೆ ನಾನು ಅದರ ಬಗ್ಗೆ ಕಡ್ಡಾಯವಾಗಿ ಕೂಗಿ ಹೇಳುವೆನು. ಯಾರಾದರೂ ಅದಕ್ಕೆ ಸಂಬಂಧಿಸಿ ಕಾರ್ಯನಿರತನಾಗುತ್ತಾನೋ ಇಲ್ಲವೋ ಎಂದು ನೋಡಬೇಕಾಗಿಲ್ಲ.

ಆದುದರಿಂದ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿ ನಮ್ಮೊಳಗೆ ನಮ್ಮ ಸ್ವಭಾವ ಗುಣಗಳಿಗೆ ಸಂಬಂಧಿಸಿ ಪರಿಶುದ್ಧ ಬದಲಾವಣೆ ಉಂಟು ಮಾಡಿದ್ದೇವೆಂದು ನಮ್ಮ ಪ್ರತಿಯೊಂದು ಕೆಲಸದ ಮೂಲಕ ಇತರರಿಗೆ ಸಾಬೀತುಗೊಳಿಸಬೇಕು. ನಾವು ಜನರಿಗೆ ಆ ಸದ್ಗುಣಗಳನ್ನು ತೋರಿಸಬೇಕು. ಇದು ತಬ್ಲೀಗ್ ಮಾಡುವ ಮಾರ್ಗವೂ ಆಗಿದೆ. ನಾವು ತಖ್ವದಲ್ಲಿ ಚಲಿಸಿ, ನಮ್ಮ ಸ್ವಭಾವ ಗುಣಗಳಲ್ಲಿ ಪರಿಶುದ್ಧ ಬದಲಾವಣೆಯನ್ನು ಉಂಟುಮಾಡಿ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅತ್ಯುತ್ತಮ ಮಾದರಿಯನ್ನು ನಮ್ಮ ಮುಂದೆ ಇರಿಸಿ ಉನ್ನತ ಸ್ವಭಾವ ಗುಣಗಳನ್ನು ಪ್ರತಿ ಸಮಯದಲ್ಲಿ ಪ್ರಕಟಿಸುವಂತಾಗಲು ಅಲ್ಲಾಹನು ನಮಗೆ ಭಾಗ್ಯ ದಯಪಾಲಿಸಲಿ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಇಚ್ಛೆಪ್ರಕಾರ ಜೀವನ ನಡೆಸಲು ಅಲ್ಲಾಹನು ತೌಫೀಕ್ ನೀಡಲಿ – ಆಮೀನ್.

ನಮಾಝ್ ನಂತರ ಎರಡು ಜನಾಝ ಗಾಯಿಬ್ ನಿರ್ವಹಿಸುವೆನು. ಒಂದು ಅಮೇರಿಕದ ಮುಕರ್ರಮ್ ಲುತ್ಫುರ್ರಹ್ಮಾನ್ ಮಹ್ಮೂದ್ ಸಾಹೇಬರದಾಗಿದೆ. ಮುಕರ್ರಮ್ ಅತಾವುರ್ರಹ್ಮಾನ್ ಸಾಹೇಬರ ಪುತ್ರ. ಅವರು 27–5–2017ರಂದು ನಿಧನ ಹೊಂದಿದರು– ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್. ಎರಡನೆಯ ಜನಾಝ ಅಝೀಝುಮ್ ಮಿರ್ಝಾ ಉಮರ್ ಅಹ್ಮದ್ ಸಾಹೇಬರದಾಗಿದೆ. ಅವರು ಸಾಹಿಬ್ ಝಾದ ಡಾಕ್ಟರ್ ಮಿರ್ಝಾ ಮುನವ್ವರ್ ಅಹ್ಮದ್ ಸಾಹೇಬ್ (ಮರ್ಹೂಮ್) ಅವರ ಪುತ್ರ. ಜೂನ್ 5ರಂದು ರಬ್ವದಲ್ಲಿ 67ನೇ ವಯಸ್ಸಿನಲ್ಲಿ ನಿಧನ ಹೊಂದಿದರು– ಇನ್ನಾಲಿಲ್ಲಾಹಿ ವಇನ್ನಾ ಇಲೈಹಿ ರಾಜಿಊನ್. (ಮೃತರಾದವರ ಸದ್ಗುಣಗಳನ್ನು ಹುಝೂರ್ ವಿವರಿಸಿದರು).

*****


***Friday Sermon delivered by Hadrath Khaleefatul Masih Al Khamis(atba)***

*At, Masjid Baithul Futhuh, London on 09-06-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

**Email**: *khutuba.kannada@gmail.com*

**You can find all the Sermons archived at**: www.alislam.org/friday-sermon